

## ಮೊದಲು ನೋಡಬೇಕು ಮಂಚಾಲಮ್ಮ

ಮಂತ್ರಾಲಯದಲ್ಲಿ ರಾಘವೇಂದ್ರ ಸ್ವಾಮಿಗಳ ದೇವಸ್ಥಾನದ ವೃಂದಾವನಗಳ ದರ್ಶನ ಪಡೆಯುವ ಮೊದಲು ಪಕ್ಕದಲ್ಲಿಯೇ ಇರುವ ಮಂಚಾಲಮ್ಮ ದೇವಿಯ ದರ್ಶನ ಪಡೆಯುವುದು ಪ್ರತೀತಿ.

ರಾಯರಿಗೆ ಭೂಮಿ ಕೊಟ್ಟ ದೇವಿ ಮಂಚಾಲಮ್ಮ. ಆದ್ದರಿಂದ ದೇವಿಯನ್ನು ಮಂತ್ರಾಲಯದ ಅಧಿದೇವತೆ ಎಂದು ಕರೆಯುತ್ತಾರೆ. ಈ ಪ್ರದೇಶ ಹಿಂದೆ ಹಿರಣ್ಯ ಕಶ್ಯಪನ ರಾಜ್ಯವಾಗಿತ್ತು, ಇಲ್ಲಿರುವ ಭವಾನಿಯ ಮತ್ತೊಂದು ಹೆಸರು ಮಂಚಾಲಾಂಬಿಕೆ ಆಗಿದೆ. ಈಕೆ ಅವನ ಕುಲದೇವತೆ ಆಗಿದ್ದಳು ಎಂದು ಇತಿಹಾಸದ ಪುಟಗಳಲ್ಲಿ ದಾಖಲಾಗಿದೆ. ಮಾ ಮಂಚಾಲಮ್ಮ ಎಂಬುದು ದೇವಿಯ ಮತ್ತೊಂದು ರೂಪ. ಗ್ರಾಮದೇವತೆಯ ಆಶೀರ್ವಾದದ ಬಳಿಕವೇ ರಾಯರ ದರ್ಶನಕ್ಕೆ ಹೋಗಲಾಗುತ್ತದೆ. ಮಂತ್ರಾಲಯದ ಮುಖ್ಯ ದೇವತೆ ಆಶೀರ್ವಾದ ಪಡೆದ ನಂತರವೇ ರಾಘವೇಂದ್ರರು ವೃಂದಾವನ ಪ್ರವೇಶಿಸಿದರು.

ರಾಘವೇಂದ್ರರು ವಿವಿಧ ಮಂತ್ರಗಳನ್ನು ಪಠಿಸಿ ಧ್ಯಾನ ಮಾಡಿದ್ದರು, ಇದರಿಂದಾಗಿ ಮಾ ಮಂಚಾಲಮ್ಮ ಅವರ ಮುಂದೆ ಕಾಣಿಸಿಕೊಂಡರು. ಉದಾತ್ತ ಕಾರ್ಯಗಳಿಗಾಗಿ ಅವರನ್ನು ಆಶೀರ್ವದಿಸಿದರು. ಕೆಲವರು ಮಂತ್ರಾಲಯ ಪಟ್ಟಣವನ್ನು ಮಂಚಾಲಿ ಎಂದೂ ಕರೆಯುತ್ತಿದ್ದರು. ಮಂಚಾಲಮ್ಮ ಪರಶುರಾಮನ ಪ್ರೀತಿಯ ತಾಯಿ ಮಾ ರೇಣುಕಾ ದೇವಿ ಎಂದು ನಂಬಲಾಗಿದೆ. ಹಲವು ವರ್ಷಗಳ ಹಿಂದೆ ದೇವಾಲಯವನ್ನು ನವೀಕರಣ ಮಾಡಲಾಗಿದೆ.

## ಮಂತ್ರಾಲಯದ ಹೆಸರು ಬೆಳಗಿದ ರಾಯರು



ಶ್ರೀ ರಾಘವೇಂದ್ರ ಸ್ವಾಮಿಗಳ (1595–1671), ಬಾಲ್ಯದ ಹೆಸರು ವೆಂಕಣ್ಣಭಟ್ಟ. ಯತಿಗಳಾಗಿ ಸಿದ್ಧಿ ಪಡೆದ ನಂತರ ಶ್ರೀ ರಾಘವೇಂದ್ರ ಸ್ವಾಮಿಗಳೆಂದು ಪ್ರಸಿದ್ಧರಾದರು.

ರಾಘವೇಂದ್ರಯತಿ, ಸುಧೀಂದ್ರತೀರ್ಥರ ತರುವಾಯ 1623ರಲ್ಲಿ ಶ್ರೀ ರಾಘವೇಂದ್ರ ತೀರ್ಥರೆಂಬ ಹೆಸರಿನಲ್ಲಿ ಮಂಚಾಲಿಯಲ್ಲಿ ಮಠ ಸ್ಥಾಪನೆ ಮಾಡಿದರು. ಹೈದರಾಬಾದ್ ನವಾಬ ಮಂತ್ರಾಲಯ ಗ್ರಾಮವನ್ನೇ ಮಠಕ್ಕೆ ಬಳುವಳಿಯಾಗಿ ಕೊಟ್ಟರು. ಇಂದು ಮಂತ್ರಾಲಯ, ಅಂದರೆ ಶ್ರೀ ರಾಘವೇಂದ್ರ ಸ್ವಾಮಿಗಳ ಮಠ ಎನ್ನುವಷ್ಟರ ಮಟ್ಟಿಗೆ ಗ್ರಾಮ ಪ್ರಸಿದ್ಧಿ ಪಡೆದುಕೊಂಡಿದೆ. ಈ ಕುರಿತು 'ಮದ್ರಾಸ್ ಗೆಜೆಟಿಯರ್'ನಲ್ಲೂ ಉಲ್ಲೇಖವಿದೆ. 1642ರಲ್ಲಿ ಛತ್ರಪತಿ ಶಿವಾಜಿ ಮಹಾರಾಜರು ಶ್ರೀಗಳನ್ನು ಕೊಲ್ಹಾಪುರಕ್ಕೆ ಕರೆಸಿಕೊಂಡಿದ್ದರು. ಶ್ರೀ ರಾಘವೇಂದ್ರ ಸ್ವಾಮಿಗಳು ಮುಂಬೈಗೂ ತೆರಳಿದ್ದರು. ಇದೇ ಕಾರಣಕ್ಕೆ ಕೊಲ್ಹಾಪುರದಲ್ಲೂ ಒಂದು ಮಠ ಸಕ್ರಿಯವಾಗಿ ಧಾರ್ಮಿಕ ಕಾರ್ಯಗಳಲ್ಲಿ ತೊಡಗಿಸಿಕೊಂಡಿದೆ. ಮಹಾರಾಷ್ಟ್ರದಲ್ಲೂ ಅಪಾರ ಸಂಖ್ಯೆಯಲ್ಲಿ ರಾಯರ ಭಕ್ತರು ಇದ್ದಾರೆ.

ಮಂತ್ರಾಲಯದಲ್ಲಿ ರಾಯರ ಭಕ್ತರು, ದಾನಿಗಳು ವಸತಿಗೃಹಗಳನ್ನು ನಿರ್ಮಿಸಿ ಭಕ್ತ ಸಮೂಹಕ್ಕೆ ನೆರವಾಗಿದ್ದಾರೆ. ದಾನಿಗಳಿಗೆ ಗರಿಷ್ಠ 90 ದಿನ ಉಚಿತವಾಗಿ ಕೊಡುವ ಒಪ್ಪಂದದ ಮೇಲೆ ಅವುಗಳನ್ನು ನಿರ್ಮಾಣ ಮಾಡಲಾಗಿದೆ.

ಮಂತ್ರಾಲಯದಲ್ಲಿರುವ ವಸತಿಗೃಹಗಳನ್ನು ಎಲ್ಲವನ್ನೂ ಆನ್‌ಲೈನ್ ಮೂಲಕ ಬುಕ್ ಮಾಡಲಾಗುತ್ತಿದೆ. ಶ್ರೀಮಂತರಿಗೊಂದು, ಬಡವರಿಗೆ ಇನ್ನೊಂದು ವ್ಯವಸ್ಥೆ ಇಲ್ಲ. ಮೊದಲು ಬಂದವರಿಗೆ ಮೊದಲ ಆದ್ಯತೆ ಇರುತ್ತದೆ. ಆರಾಧನೆ ಸಂದರ್ಭದಲ್ಲಿ ವಸತಿಗಳು ದೊರೆಯದಿದ್ದರೂ ಭಕ್ತರು ಆವರಣದಲ್ಲೇ ಉಳಿದುಕೊಂಡು ಭಕ್ತಿಸೇವೆ ಸಲ್ಲಿಸುತ್ತಾರೆ.

ಮಠದ ಆವರಣದಲ್ಲಿ ಶ್ರೀ ವಿಜಯೀಂದ್ರ ವಿಶ್ರಾಂತಿ ಭವನ, ಅನ್ನಪೂರ್ಣ ಭೋಜನ ಶಾಲೆಯಲ್ಲಿ ಶುದ್ಧ ನೀರಿನ ಘಟಕ ಪ್ರಾರಂಭಿಸಲಾಗಿದೆ.

### ಗೋಶಾಲೆಯಲ್ಲಿ 900ಕ್ಕೂ ಹೆಚ್ಚು ಹಸುಗಳು

ಶ್ರೀರಾಘವೇಂದ್ರ ಸ್ವಾಮಿಗಳ ಮಠದಿಂದ ಮಂತ್ರಾಲಯದಲ್ಲಿ ನಿರ್ವಹಿಸಲಾಗುತ್ತಿರುವ ಗೋಶಾಲೆಯಲ್ಲಿ ಸುಮಾರು 900ಕ್ಕೂ ಹೆಚ್ಚು ಹಸುಗಳಿವೆ. ಗೋಶಾಲೆಯಲ್ಲಿ ಹಾಲು ಕೊಡುವ ಹಸುಗಳು ಮತ್ತು ಹಾಲು ಕೊಡದ ಹಸುಗಳ ರಕ್ಷಣೆಗೆ ಸಮಾನ ಪ್ರಾಮುಖ್ಯತೆ ಕೊಡಲಾಗಿದೆ. ಅಂತೆಯೇ ರಾಯಚೂರು ಜಿಲ್ಲೆಯ ರೈತರು ಪ್ರತಿವರ್ಷ ಒಣ ಮೇವು ದೇಣಿಗೆ ಕೊಡುತ್ತ ಬಂದಿದ್ದಾರೆ.

ಮಂತ್ರಾಲಯದಲ್ಲಿ ಪ್ರತಿದಿನ ಸರಾಸರಿ 5000 ಭಕ್ತರಿಗೆ ಉಚಿತ ಅನ್ನಪ್ರಸಾದ ಇರುತ್ತದೆ. ಜಾತಿ ಮತ್ತು ಧರ್ಮವನ್ನು ಲೆಕ್ಕಿಸದೇ ₹ 2 ಲಕ್ಷ ವ್ಯಯಿಸಲಾಗುತ್ತಿದೆ. ಹಸಿದು ಬಂದವರಿಗೆ ಅನ್ನ ಕೊಡುವ ಸಂಪ್ರದಾಯವನ್ನು ಮುಂದುವರಿಸಿಕೊಂಡು ಬರಲಾಗಿದೆ.

### ಆಧ್ಯಾತ್ಮಿಕ ಕೃತಿಗಳ ಪ್ರಕಟಣೆ

ಸನಾತನ ಧರ್ಮದ ಅಸ್ತಿತ್ವವನ್ನು ಮುಂದುವರಿಸಲು ರಾಘವೇಂದ್ರ ಸ್ವಾಮಿ ಮಠವು ಪುಸ್ತಕ ಪ್ರಕಟಣೆಗೆ ಆದ್ಯತೆ ನೀಡಿದೆ. ಅಪರೂಪದ ಮತ್ತು ಹಳೆಯ ಹಸ್ತಪ್ರತಿಗಳನ್ನು ಪಡೆಯುವ ಯೋಜನೆಗಳಿವೆ. ಈ ಉದ್ದೇಶಕ್ಕಾಗಿ ಒಂದು ಸಂಶೋಧನಾ ಕೇಂದ್ರವನ್ನು ಸ್ಥಾಪಿಸಲಾಗಿದೆ. ಸಂಶೋಧಿಸಿದ ಕೃತಿಗಳನ್ನು ಪ್ರಕಟಿಸುವ ಜತೆಗೆ ಓದುಗರಿಗೆ ತಲುಪುವಂತೆಯೂ ಮಾಡಲಾಗಿದೆ.

ಶ್ರೀಮಠವು ಶ್ರೀಗುರುಸಾರ್ವಭೌಮ ವೇದ ಪಾಠಶಾಲೆಯನ್ನೂ ಪ್ರಾರಂಭಿಸಿದೆ. ಆಸಕ್ತರಿಗೆ ಸಂಸ್ಕೃತ ಹಾಗೂ ವೇದ ಅಧ್ಯಯನ ಮಾಡಿಸಲಾಗುತ್ತಿದೆ.

ಮಂತ್ರಾಲಯಕ್ಕೆ ಸಾರಿಗೆ ಸಂಪರ್ಕದ ಕೊರತೆ ಇಲ್ಲ. ರಸ್ತೆ ಸಾರಿಗೆ ಸಂಸ್ಥೆ, ಖಾಸಗಿ ಬಸ್‌ಗಳು ಬಂದು ಹೋಗುತ್ತಿವೆ. ರೈಲು ಸೌಲಭ್ಯವೂ ಇದೆ. ದೂರದಿಂದ ಬಂದು ಹೋಗುವ ಭಕ್ತರ ಸಮಯ ಉಳಿಸುವ ದಿಸೆಯಲ್ಲಿ ವಿಮಾನ ಸೇವೆ ಒದಗಿಸುವ ಉದ್ದೇಶ ಹೊಂದಲಾಗಿದೆ. ವಿಮಾನ ನಿಲ್ದಾಣ ಮಾಡಲು ಅಗತ್ಯವಿರುವ ಜಾಗವನ್ನು ನೀಡುವಂತೆ ಆಂಧ್ರಪ್ರದೇಶ ಸರ್ಕಾರಕ್ಕೆ ಒಪ್ಪಿಸಲಾಗಿದೆ.